**ಎಸ್ ನಂ. 28/2022**
**ಡಿ ಡಬ್ಲ್ಯೂ: 02**

**ದಿ: 08-08-2024 ರಂದು ಸಾಕ್ಷಿಯನ್ನು ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

**ಪಾಟೀ ಸವಾಲು: ವಾದಿ ಪರ ಶ್ರೀ ಆರ್ ಜಿ ಎನ್ ವಕೀಲರಿಂದ:**

ಪ್ರತಿವಾದಿ ನಂ 2(ಎ) ನನ್ನ ಅಣ್ಣನ ಹೆಂಡತಿ. ವಿಜಯ ವಿಠಲ ನನ್ನ ಹಿರಿಯ ಸಹೋದರ ಅವರು ಮೃತಪಟ್ಟಿದ್ದಾರೆ. 2(ಎ) ದಿಂದ 2(ಇ) ನಾವು ಎಲ್ಲರೂ ಅಣ್ಣ ತಮ್ಮಂದಿರು ಅಂದರೆ ನಿಜ. ನನಗೆ ವಾದಿಯರ ಪರಿಚಯ ಇದೆ. ದಾವಾ ಆಸ್ತಿ ಮೂಲತಃ

ರಮಾಬಾಯಿ ಇವರಿಗೆ ಸೇರಿರುತ್ತದೆ. ಸದರಿ ರಮಾಬಾಯಿ ವಾದಿಯರ ಪೂರ್ವಜರು ಎಂದರೆ ಸರಿಯಲ್ಲ. ಸದರಿಯವರ ಪೂರ್ಣ ಹೆಸರು ರಮಾಬಾಯಿ ತಿಮ್ಮಾಜಿ ಎಂದು ಮಾತ್ರ ಗೊತ್ತಿದೆ. ಅವರ ಸಂಪೂರ್ಣ ಹೆಸರು ರಮಾಬಾಯಿ ತಿಮ್ಮಾಜಿ ದೇಸಾಯಿ ಎನ್ನುವದು ಸುಳ್ಳು. ದಾವಾ ಆಸ್ತಿ ಮೂಲತಃ ನಾರಾಯಣರಾವ್ ದೇಸಾಯಿ ಎನ್ನುವವರಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ನಾರಾಯಣರಾವ್ ರವರಿಗೆ ತಿಮ್ಮಾಜಿ, ಕೃಷ್ಣಾಜಿ, ಶಿವಾಜಿ, ವೆಂಕಾಜಿ ಹಾಗೂ ಬಾಪು ಎನ್ನುವವರು ನನಗೆ ಗೊತ್ತಿಲ್ಲ. ಸದರಿಯವರಲ್ಲಿ ಕೃಷ್ಣಾಜಿ ಎನ್ನುವವರು ವಾದಿಯರ ಅಜ್ಜ ಎಂದರೆ ನಿಜ. ಉಳಿದವರು ವಾದಿಯರ ಅಜ್ಜಂದಿರು ಎನ್ನುವದು ನನಗೆ ಗೊತ್ತಿಲ್ಲ. ನಾರಾಯಣರಾವ್ ದೇಸಾಯಿಯವರ ಮಕ್ಕಳು 1947 ರಲ್ಲಿ ದಾವಾ ಆಸ್ತಿಯಲ್ಲಿ ಪಾಲು ಮಾಡಿಕೊಂಡಿರುವುದು ನನಗೆ ಗೊತ್ತಿಲ್ಲ. ಪಾಲಿನಲ್ಲಿ ಸರ್ವೆ ನಂ 6, 8, 73, 75 ತಿಮ್ಮಾಜಿರಾವ್ ಇವರ ಪಾಲಿಗೆ ಬಂದಿರುತ್ತದೆ ಎನ್ನುವದು ಸುಳ್ಳು. ಅದಕ್ಕೆ ಸಂಬಂಧಿಸಿದಂತೆ ನಿಪಿ-10 ರಂತೆ ಮ್ಯುಟೇಷನ ಆಗಿರುತ್ತದೆ ಎನ್ನುವದು ಸುಳ್ಳು. ಕೃಷ್ಣಾಜಿ ಇವರ ಪಾಲಿಗೆ ಸರ್ವೆ ನಂ 10, 89, 95, 97 ಪಾಲಿಗೆ ಬಂದಿರುತ್ತದೆ ಎನ್ನುವದು ಸುಳ್ಳು. ನಿಪಿ-10 ರ ಪ್ರಕಾರ ಶಿವಾಜಿ, ವೆಂಕಾಜಿ, ಬಾಪು ಇವರಿಗೆ ಆಸ್ತಿಗಳು ಹೋಗಿರುತ್ತವೆ ಎನ್ನುವದು ಸುಳ್ಳು. ನಿಪಿ-10 ನ್ನು ನಾನು ಪ್ರಶ್ನಿಸಿರುವುದಿಲ್ಲ ಆದರೆ ನಮ್ಮ ಪೂರ್ವಜರು ಪ್ರಶ್ನಿಸಿರುತ್ತಾರೆ. ಯಾವ ವರ್ಷದಂದು ಸದರಿ ಮ್ಯುಟೇಷನ ಪ್ರಶ್ನಿಸಿದ್ದರು ಎನ್ನುವದು ನನಗೆ ಗೊತ್ತಿಲ್ಲ.

ದಾವಾ ಆಸ್ತಿಗೆ ಸಂಬಂಧಿಸಿದಂತೆ ಬಾಂಬೆ ಟ್ರಿಬನಲ್ ನಲ್ಲಿ ಕೃಷ್ಣಾಜಿ ದೇಸಾಯಿ ಹಾಗೂ ಮದ್ವಚಾರ ಗುಡಿ ಇವರ ಮಧ್ಯ ದಾವೆ ನಡೆದಿತ್ತು ಎಂದರೆ ನಿಜ. ಸದರಿ ದಾವೆಯಲ್ಲಿ ವಾದಿಯ ಅಜ್ಜ ನಾರಾಯಣ ದೇಸಾಯಿ ಇವರು ದಾವಾ ಆಸ್ತಿಯ ಕಬ್ಜಾ ಕೇಳಿದ್ದರು ಎಂದರೆ ನಿಜ. 1957 ರಲ್ಲಿ ಮಾಲ್ಕಿ ಆಸ್ತಿಗೆ ಸಂಬಂಧಿಸಿದಂತೆ ತಕರಾರು ಆಗಿರಲಿಲ್ಲ ಎಂದರೆ ಸರಿಯಲ್ಲ. ಮದ್ವಾಚಾರ್ಯ ಗುಡಿ ಇವರಿಗೆ ದಾವಾ ಆಸ್ತಿಯನ್ನು ದೀಪ ಹಚ್ಚುವ ಸಲುವಾಗಿ ರೂ 14 ಗಳಿಗೆ ಲೀಜ್ (ಲಾವಣಿ) ನೀಡಲಾಗಿತ್ತು ಎನ್ನುವದು ಸುಳ್ಳು. ಪಾಟಿಲಕಿ ಕೆಲಸ ಮಾಡುವ ಸಲುವಾಗಿ ಮದ್ವಾಚಾರ್ಯ ಗುಡಿರವರಿಗೆ ರೂ 14 ಸಂಬಳ ನಿಗದಿಪಡಿಸಲಾಗಿತ್ತು ಎನ್ನುವದು ಸುಳ್ಳು. ಮದ್ವಾಚಾರ್ಯ ಗುಡಿ ಹಾಗೂ ಅವರ ಕುಟುಂಬದವರು ಎಂದಿಗೂ ದಾವಾ ಆಸ್ತಿಯ ಮಾಲೀಕರಾಗಿರಲಿಲ್ಲ ಎಂದರೆ ಸರಿಯಲ್ಲ. ಮದ್ವಾಚಾರ್ಯ ಗುಡಿ ಮತ್ತು ಅವರ ಕುಟುಂಬದವರು ದಾವಾ ಆಸ್ತಿಯ ಮಾಲೀಕತ್ವ ಪಡೆದುಕೊಂಡ ಬಗ್ಗೆ 1943 ರಿಂದ ಇವತ್ತಿನವರೆಗೆ ಯಾವುದೆ ಕ್ರಯ ಪತ್ರ ಅಥವಾ ನೋಂದಾಯಿತ ದಾಖಲೆಯನ್ನು ಹಾಜರ ಪಡಿಸಿಲ್ಲ, ಆದರೆ ಡ ಉತಾರನ್ನು ಹಾಜರ ಪಡಿಸಿದ್ದೇನೆ.

ನಿಪಿ-4 ರಲ್ಲಿ ಮದ್ವಾಚಾರ್ಯ ಗುಡಿಯವರ ಹೆಸರು ಕಬ್ಜೆದಾರರ ಕಾಲಂ ನಲ್ಲಿ ಮಾತ್ರ ದಾಖಲ ಇರುತ್ತದೆ ಎನ್ನುವದು ಸುಳ್ಳು. ಮಾಲ್ಕಿ ಹಕ್ಕಿನ ಕಾಲಂ ನಲ್ಲಿ ತಿಮ್ಮಾಜಿ ಮತ್ತು ಕೃಷ್ಣಾಜಿ ಇವರ ಹೆಸರುಗಳು ಇರುತ್ತವೆ ಎನ್ನುವದು ಸುಳ್ಳು. 1966-67 ರವರೆಗೆ ನಾರಾಯಣರಾವ್ ದೇಸಾಯಿ ಇವರ ಹೆಸರು ಪಹಣಿ ಪತ್ರಿಕೆಗಳಲ್ಲಿ ನಿರಂತರವಾಗಿ

ದಾಖಲಾಗಿರುತ್ತವೆ ಎನ್ನುವದು ಸುಳ್ಳು. ತಿಮ್ಮಾಜಿ ದೇಸಾಯಿ ಇವರು ದಿನಾಂಕ 15.12.1935 ರಂದು ಮೃತಪಟ್ಟಿರುತ್ತಾರೆ ಎನ್ನುವದು ನನಗೆ ಗೊತ್ತಿಲ್ಲ. ವಾದಿಯರು ಹಾಜರ ಪಡಿಸಿದ ದಾಖಲೆಗಳನ್ನು ನಾನು ನೋಡಿದ್ದೇನೆ. 1935 ರಲ್ಲಿ ತಿಮ್ಮಾಜಿ ಇವರು ಮೃತಪಟ್ಟ ನಂತರ ಅವರ ವಾರಸುದಾರರ ಹೆಸರು ನಿಪಿ-7 ರಂತೆ ದಾವಾ ಆಸ್ತಿ ಹಾಗೂ ಇತರೆ ಆಸ್ತಿಗಳಲ್ಲಿ ದಾಖಲಾಗಿರುತ್ತವೆ ಎನ್ನುವದು ಸುಳ್ಳು.

ಮದ್ವಾಚಾರ್ಯ ರಾಮಾಚಾರ ಗುಡಿ ಇವರಿಗೆ ದಾವಾ ಆಸ್ತಿಯು 1870 ರಲ್ಲಿ ರಮಾಬಾಯಿ ತಿಮ್ಮಾಜಿ ಎನ್ನುವರು ಭಕ್ಷಿಸ ಮೂಲಕ ನೀಡಿದ್ದರಿಂದ ಬಂದಿರುತ್ತದೆ. ಸದರಿ ರಮಾಬಾಯಿ ಇವರು ತಿಮ್ಮಾಜಿ ದೇಸಾಯಿ ಇವರ ಹೆಂಡತಿ ಅಂದರೆ ಸರಿಯಲ್ಲ, ಸದರಿ ರಮಾಬಾಯಿ ತಿಮ್ಮಾಜಿ ಇವರು ಬೇರೆ ವ್ಯಕ್ತಿ ಇರುತ್ತಾರೆ ಎಂದು ಸಾಕ್ಷಿ ಹೇಳುತ್ತಾರೆ. 1870 ರ ಭಕ್ಷಿಸ ಪತ್ರವನ್ನು ನಾವು ಹಾಜರ ಪಡಿಸಿಲ್ಲ. 1870 ರಲ್ಲಿ ನಮ್ಮ ಪೂರ್ವಜರು ಇರಲಿಲ್ಲ ಹಾಗಾಗಿ ನನಗೆ ಅದರ ಬಗ್ಗೆ ಯಾವುದೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಮ್ಮ ಲಿಖಿತ ಪ್ರತಿವಾದ ಪತ್ರದಲ್ಲಿ ಭಕ್ಷಿಸ ಪತ್ರದ ಬಗ್ಗೆ ತಿಳಿಸಿರುತ್ತೇವೆ. ಸಾಕ್ಷಿ ತಮ್ಮ ಪ್ರತಿವಾದ ಪತ್ರವನ್ನು ಪರಿಶೀಲಿಸಿ ಈ ಬಗ್ಗೆ ತಿಳಿಸಿಲ್ಲ ಎಂದು ಹೇಳುತ್ತಾರೆ. 1870 ರ ಭಕ್ಷಿಸ ಪತ್ರದ ವಿಷಯವನ್ನು ನಮ್ಮ ಪೂರ್ವಜರು ಹೇಳಿದ ಮೇರೆಗೆ ಹೇಳುತ್ತೇನೆ. ಸದರಿ ಭಕ್ಷಿಸ ಪತ್ರ ಯಾವುದಕ್ಕೆ ಸಂಬಂಧಿಸಿದ್ದು ಎನ್ನುವದರ ಬಗ್ಗೆ ಗೊತ್ತಿಲ್ಲ ಎಂದರೆ ಸಾಕ್ಷಿ ದಾವಾ ಆಸ್ತಿಯನ್ನು ಹೊರತು ಪಡಿಸಿ ಬೇರೆ ಆಸ್ತಿಗಳ ಬಗ್ಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಮದ್ವಾಚಾರ್ಯ ಗುಡಿ ಹಾಗೂ ರಮಾಬಾಯಿ ದೇಸಾಯಿ ಇವರ ಮಧ್ಯ ಯಾವುದೆ ಸಂಬಂಧ ಇರಲಿಲ್ಲ ಎನ್ನುವದು ಸುಳ್ಳು. ರಮಾಜಿ ತಿಮ್ಮಾಜಿ ದೇಸಾಯಿ ಹಾಗೂ ಮದ್ವಾಚಾರ್ಯ ಗುಡಿ ಇವರು ಬೇರೆ ಬೇರೆ ಎಂದರೆ ನಿಜ.

ಮದ್ವಾಚಾರ್ಯ ರಾಮಾಚಾರ್ ಗುಡಿ ಇವರಿಗೆ ಲಾವಣಿ ಪ್ರಕಾರ ದೀಪ ಹಚ್ಚಲು ಮಾತ್ರ ಹಕ್ಕಿತ್ತು ಎನ್ನುವದು ಸುಳ್ಳು. ಸದರಿಯವರಿಗೆ ವಂಶಪರಂಪರೆ ಅನುಭವಿಸುವ ಹಾಗೂ ಪರಬಾರೆ ಮಾಡುವ ಹಕ್ಕು ಇರಲಿಲ್ಲ ಎನ್ನುವದು ಸುಳ್ಳು. ಸಾಕ್ಷಿ ಮುಂದುವರೆದು 1870 ರಲ್ಲಿ ಭಕ್ಷಿಸ ಕೊಟ್ಟಿದ್ದಾರೆ ಎನ್ನುತ್ತಾರೆ. 1973 ರಿಂದ ಇಲ್ಲಿಯವರೆಗೆ ಕಂದಾಯ ದಾಖಲೆಗಳಲ್ಲಿ ರಮಾಬಾಯಿ ದೇಸಾಯಿ ಯವರು ಮದ್ವಾಚಾರ್ಯ ಗುಡಿಯವರಿಗೆ ದಾವಾ ಆಸ್ತಿಯನ್ನು ದಾನವಾಗಿ ಕೊಟ್ಟ ಬಗ್ಗೆ ನಮೂದಿಸಿಲ್ಲ ಎಂದರೆ ನಿಜ. 1870 ರ ಹಳೆ ದಾಖಲೆಗಳು ನೋಂದಣಿ ಕಚೇರಿಯಲ್ಲಿ ಲಭ್ಯವಿರುತ್ತವೆ ಎನ್ನುವದು ನನಗೆ ಗೊತ್ತಿಲ್ಲ. ನಕಲು ಪ್ರತಿಯನ್ನು ಕೋರಿ ಅರ್ಜಿ ಸಲ್ಲಿಸಿದ ಬಗ್ಗೆ ಹಿಂಬರಹ ಹಾಜರ ಪಡಿಸಿಲ್ಲ. ಸಾಕ್ಷಿ ಮುಂದುವರೆದು ಸಾಕಷ್ಟು ಪ್ರಕರಣಗಳು ಆಗಿದ್ದು ಸದರಿ ದಾಖಲೆ ಯಾವುದರಲ್ಲಿ ಇದೆ ಎನ್ನುವದು ಗೊತ್ತಿಲ್ಲ ಎನ್ನುತ್ತಾರೆ.

1ನೇ ಪ್ರತಿವಾದಿ ನನ್ನ ವಿರುದ್ಧ ಇದೆ ನ್ಯಾಯಾಲಯದಲ್ಲಿ ಅಸಲ ದಾವಾ ನಂ 123/2016 ರಲ್ಲಿ ಸಲ್ಲಿಸಿದ್ದರು ಎಂದರೆ ನಿಜ. ಸದರಿ ದಾವೆಯನ್ನು ಲಾವಣಿ ಹಣ 14

ರೂಗಳನ್ನು ನೀಡಬೇಕು ಎನ್ನುವ ಬಗ್ಗೆ ಸಲ್ಲಿಸಿದ್ದರು ಎಂದರೆ ನಿಜ. ಸದರಿ ದಾವೆ ವಜಾಗೊಂಡಿದೆ. ಮೃತ 3ನೇ ಪ್ರತಿವಾದಿ ಹಾಗೂ ಅವರ ವಾರಸುದಾರರು ಮಾಲೀಕರು ಹಾಗೂ ಕಬ್ಜೆದಾರರು ಎನ್ನುವ ಬಗ್ಗೆ ದಾಖಲೆಗಳನ್ನು ಹಾಜರ ಪಡಿಸಿಲ್ಲ ಎಂದರೆ ಸಾಕ್ಷಿ 1943 ರಲ್ಲಿ ಮದ್ವಾಚಾರ್ಯ ನಮ್ಮ ತಂದೆ ಹೆಸರಿಗೆ ಹಕ್ಕುಬಿಟ್ಟ ಪತ್ರ ಬರೆದುಕೊಟ್ಟಿದ್ದಾರೆ ಎನ್ನುತ್ತಾರೆ. ಪ್ರತಿವಾದಿ ನಂ 3 (ಎ) ದಿಂದ (ಡಿ) ರವರ ಹೆಸರುಗಳು ಕಂದಾಯ ದಾಖಲೆಗಳಲ್ಲಿ ಇರುವುದಿಲ್ಲ. ಏಕೆಂದರೆ ಮದ್ವಾಚಾರ್ಯ ಇವರು ಹಕ್ಕುಬಿಟ್ಟ ಪತ್ರ ಬರೆದುಕೊಟ್ಟಿರುತ್ತಾರೆ. ಮದ್ವಾಚಾರ್ಯ ಇವರ ದಾವಾ ಆಸ್ತಿಯ ಮಾಲೀಕರಾಗಿರಲಿಲ್ಲ ಆದ್ದರಿಂದ ಅವರಿಗೆ ನೋಂದಾಯಿತ ಹಕ್ಕುಬಿಟ್ಟ ಪತ್ರ ಮಾಡಿಕೊಡುವ ಅಧಿಕಾರ ಇರಲಿಲ್ಲ ಎನ್ನುವದು ಸುಳ್ಳು.

(ಈ ಹಂತದಲ್ಲಿ ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರುತ್ತಿದ್ದು ಕಾಲಾವಕಾಶ ನೀಡಲಾಯಿತು.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೆ ಸರಿ ಇದೆ.

ಹಿರಿಯ ದಿವಾಣಿ ನ್ಯಾಯಾಧೀಶರು,
ಕಲಘಟಗಿ.